

ಸಟ್ಟಾ ನೆನಪಾತು. ಅಲ್ಲಿಗೆ ಹೋಗಿ ಇಸ್ಕಾ ಬಂದೆ. ಸಿಕ್ಕ ಬಿದ್ರೆ ಗೋಳು ಅಂತಿದ್ದ. ಹಾಂಗಲ್ಲ ಯಾರಿಗೂ ಕೊಡಂಗಿಲ್ಲ ಅಂದಾ. ನಾನ್ ಬಿಡ್ತೀನಾ. ಅವ್ನ ಕಾಡಿ ಬೇಡಿ ಇಸ್ಕ ಬಪ್ಪಾಗ ತೆಲೆ ಹನ್ನೆರಡು ಆಣೆ ಆಯ್ತು ಕಾಣೆ. ಇನ್ ಆ ಹಂದಿ ತೆಗೀದಿದ್ರೆ ಸಮಾಧಾನ ಇಲ್ಲ ನೋಡು'

'ಹೋಯ್.. ಯಾರಿಗಾದ್ರು ಗೊತ್ತಾದ್ರೆ. ಸುಮ್ನೆ ಬಿಡಲ್ಲ ನಮ್ಮನ್ನ. ಒಂದ್ ಮಾಡಕ್ಕೆ ಹೋಗಿ ಮತ್ ಒಂದುವರೆ ಆಯ್ತೆತೇನಾ' ಎನ್ನುತ್ತ ಕಲ್ಲಮ್ಮ ಆತಂಕವನ್ನು ವ್ಯಕ್ತಪಡಿಸಿದಳು.

'ನೀ ಯಾಕ್ ಹಂಗೆ ಮಾಡ್ತಿ. ಆ ಹಂದಿ ಬರ ಜಾಗ ನಾನ್ ನೋಡಿನಿ ಮರಾಯ್ತಿ. ಅವು ಸಮಾ ಕಂಡಿಬಾಗ್ಲು ಓಣಿಯಲ್ಲಿ ಇಳ್ ಕಂಡು ಬತ್ತವೆ. ಅಲ್ಲಿಂದಲೇ ನೆಟ್ಟಾಗೆ ಇಲ್ಲಿಗೆ ಬರದು. ಈಗ ಆ ಕಂಡಿಬಾಗ್ಲು ಕಾನ್ ಬದಿ ಯಾರ್ ಹೋತಾರೆ ಹೇಳು. ಮುಂಚೆಗೆಲ್ಲ ಬೆತ್ತ ಅದು